# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ. 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070

ದೂ. 080-26718939, ಮೊ. 9483549159 ಇ-ಮೇಲ್: krvp.info@gmail.com, website: www.krvp.org



ಮಹಾಪೋಷಕರು: 'ಭಾರತರತ್ನ' ಪ್ರೊ|| ಸಿ.ಎನ್.ಆರ್. ರಾವ್ FRS

ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಗೌರವಾಧ್ಯಕ್ಷರು, ಜೆ.ಎನ್.ಸಿ.ಎ.ಎಸ್.ಆರ್.

| ಎಸ್.ವಿ. ಸಂಕನೂರ<br>ಅಧ್ಯಕ್ಷರು | ಹುಲಿಕಲ್ ನಟರಾಜ್<br>ಪ್ರೊ|| ಗುರುನಂಜಯ್ಯ ಎಸ್.ಎಂ.<br>ಉಪಾಧ್ಯಕ್ಷರು | ಗಿರೀಶ್ ಬಿ. ಕಡ್ಲೇವಾಡ<br>ಗೌರವ ಕಾರ್ಯದರ್ಶಿ | ಶ್ರೀನಾಥ್ ಬಿ.ಎನ್.<br>ಸಹ ಕಾರ್ಯದರ್ಶಿ | ನರೇಂದ್ರ ಆಡನೂರು<br>ಖಜಾಂಚಿ |
|---|---|---|---|---|


ಕರಾವಿಪ ಸಂಖ್ಯೆ : 8.4.3/IULC/2019-20/5356

ದಿನಾಂಕ : 14-08-2019

ಪ್ರಾಚಾರ್ಯರು

____________________

____________________

ಮಾನ್ಯರೇ,

ವಿಷಯ : ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ಹಾಗೂ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗಾಗಿ ರಾಜ್ಯ ಮಟ್ಟದ ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆಯಲ್ಲಿ ತಮ್ಮ ಕಾಲೇಜಿನ ವಿಜೇತ ವಿದ್ಯಾರ್ಥಿ ಭಾಗವಹಿಸುವ ಕುರಿತು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವು ಹಾಗು ಕಾಲೇಜು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ಹಾಗೂ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗಾಗಿ ವಿಶ್ವವಿದ್ಯಾಲಯ ಮಟ್ಟದ **ಕನ್ನಡ ವಿಜ್ಞಾನ ಉಪನ್ಯಾಸ** ಸ್ಪರ್ಧೆಯನ್ನು ಆಯೋಜಿಸುತ್ತಿರುವುದು ತಮಗೆ ತಿಳಿದ ವಿಷಯ. ವಿಶ್ವವಿದ್ಯಾಲಯ ಮಟ್ಟದಿಂದ ರಾಜ್ಯ ಮಟ್ಟಕ್ಕೆ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆಗೊಂಡಿರುವುದಕ್ಕೆ ಅಭಿನಂದನೆಗಳು.

ಪ್ರಸ್ತುತ ರಾಜ್ಯ ಮಟ್ಟದ ಸ್ಪರ್ಧೆಯನ್ನು **ದಿನಾಂಕ 25 ಮತ್ತು 26 ಆಗಸ್ಟ್ 2019ರಂದು ಬೀದರ್ ಜಿಲ್ಲೆಯ ಹುಮನಾಬಾದ್**ನ **ಎಸ್.ವಿ.ಇ. ಟ್ರಸ್ಟ್ ಫಾರ್ಮಸಿ ಕಾಲೇಜು** ಇಲ್ಲಿ ಆಯೋಜಿಸಲಾಗುತ್ತಿದೆ. ರಾಜ್ಯ ಮಟ್ಟದ ಸ್ಪರ್ಧೆಯು ವಿಶ್ವವಿದ್ಯಾಲಯ ಮಟ್ಟದಲ್ಲಿ ಜರುಗಿದಂತೆ ಜರುಗುವುದು.

ರಾಜ್ಯ ಮಟ್ಟದ ಸ್ಪರ್ಧೆಗೆ ರಾಜ್ಯದ 11 ವಿಶ್ವವಿದ್ಯಾಲಯಗಳಿಂದ 4 ವಿಭಾಗಗಳಲ್ಲಿ (ಪಿ.ಸಿ.ಎಂ.ಬಿ.) ಆಯ್ಕೆಯಾದ 88 ವಿದ್ಯಾರ್ಥಿಗಳು ಹಾಗೂ ಮಾರ್ಗದರ್ಶಿ ಉಪನ್ಯಾಸಕರು ಭಾಗವಹಿಸಲಿದ್ದಾರೆ.

1. **ದಿನಾಂಕ 25-08-2019 ರ ಬೆಳಿಗ್ಗೆ 10-00** ಗಂಟೆಯೊಳಗಾಗಿ **ಎಸ್.ವಿ.ಇ ಟ್ರಸ್ಟ್ ಫಾರ್ಮಸಿ ಕಾಲೇಜು, ಹುಮನಾಬಾದ್, ಬೀದರ್ ಜಿಲ್ಲೆ** ಇಲ್ಲಿ ನೋಂದಣಿ ಮಾಡಿಕೊಳ್ಳುವುದು.
2. ಆಗಸ್ಟ್ 25 ರಂದು ಬೆಳಿಗ್ಗೆ 11.00 ಕ್ಕೆ ಸ್ಪರ್ಧೆಯ ಉದ್ಘಾಟನಾ ಸಮಾರಂಭ ಜರುಗಲಿದ್ದು, ಆಗಸ್ಟ್ 26 ರಂದು ಮಧ್ಯಾಹ್ನ 2.30 ಗಂಟೆಗೆ ಸ್ಪರ್ಧೆ ಸಮಾರೋಪಗೊಳ್ಳಲಿದೆ. ಇದರ ಪ್ರಕಾರ ಶಿಬಿರಾರ್ಥಿಗಳು ಪ್ರಯಾಣದ ಯೋಜನೆ ಹಾಕಿಕೊಳ್ಳುವುದು.
3. ಭಾಗವಹಿಸುವ ವಿದ್ಯಾರ್ಥಿ ಮತ್ತು ಮಾರ್ಗದರ್ಶಿ ಉಪನ್ಯಾಸಕರಿಗೆ ಉಚಿತ ನೋಂದಣಿ ಕಿಟ್, ಊಟೋಪಾಚಾರ ಮತ್ತು ವಾಸ್ತವ್ಯದ ವ್ಯವಸ್ಥೆಯನ್ನು ಕರಾವಿಪವತಿಯಿಂದ ಕಲ್ಪಿಸಲಾಗುವುದು. ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯ ಪ್ರಕಾರ ಶಿಬಿರಾರ್ಥಿಗಳು ಪ್ರಯಾಣ ಭತ್ಯೆಯನ್ನು ಅವರ ಕಾಲೇಜಿನ ಲಭ್ಯವಿರುವ ನಿಧಿಯಿಂದ ಪಡೆಯುವುದು.
4. ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಿ ಉಪನ್ಯಾಸಕರೊಂದಿಗೆ ಸ್ಪರ್ಧೆಗೆ ಹಾಜರಾಗುವುದು.

To Dr. V. B 19/8/19

5. ವಿದ್ಯಾರ್ಥಿಗಳು ತಮ್ಮ ಉಪನ್ಯಾಸದ ಸಂಕ್ಷಿಪ್ತ ಸಾರಾಂಶ ಹಾಗೂ ಒಂದು ಪಾಸಪೋರ್ಟ್ ಅಳತೆಯ ಭಾವಚಿತ್ರವನ್ನು ನೋಂದಣಿಯ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.

6. ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾಗುವ ವಿದ್ಯಾರ್ಥಿಗಳಿಗೆ ಪ್ರಥಮ ರೂ. 5,000/-, ದ್ವಿತೀಯ ರೂ. 2,000/- ದಂತೆ 4 ವಿಭಾಗಗಳಿಗೆ ಪ್ರತ್ಯೇಕವಾಗಿ ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಗುವುದು.

7. ಭಾಗವಹಿಸುವ ಶಿಬಿರಾರ್ಥಿಗಳಿಗೆ ದಿನಾಂಕ 24-08-2019 ರಂದು ಮುಂಗಡ ವಾಸ್ತವ್ಯ ಬೇಕಿದ್ದಲ್ಲಿ ದಿನಾಂಕ 20-08-2019 ರೊಳಗಾಗಿ ಕರಾವಿಪ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯರಾದ ಶ್ರೀ ಅಣದೂರು ಮಹಾರುದ್ರಪ್ಪ ಮೊ. 9008132899 ಇವರಿಗೆ ತಿಳಿಸುವುದು.

8. ಸ್ಪರ್ಧೆಯಲ್ಲಿ ಭಾಗವಹಿಸುವ ಶಿಬಿರಾರ್ಥಿಗಳು 24-08-2019 ರ ಸಂಜೆಯೊಳಗಾಗಿ ಶ್ರೀ ರಾಜಶೇಖರ ಪಾಟೀಲ, ಯೋಜನಾ ಸಹಾಯಕರು, ಕರಾವಿಪ ಮೊ : 9008442557 ಇವರಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವುದು.

ಈ ಎಲ್ಲ ಅಂಶಗಳನ್ನು ಪರಿಗಣಿಸಿ ಮಾನ್ಯರಾದ ತಾವು ತಮ್ಮ ಕಾಲೇಜಿನ ವಿಜೇತ ವಿದ್ಯಾರ್ಥಿ ಮತ್ತು ಓರ್ವ ಮಾರ್ಗದರ್ಶಿ ಉಪನ್ಯಾಸಕರನ್ನು ಸಕಾಲಕ್ಕೆ ಬಿಡುಗಡೆ ಮಾಡಿ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಲು ತಮ್ಮಲ್ಲಿ ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಸಕ್ತ ಕಾರ್ಯಕ್ರಮದ ರಾಜ್ಯ ಸಂಯೋಜಕರು ಮತ್ತು ಕರಾವಿಪ ಕಾರ್ಯಕಾರಿ ಸಮಿತಿ ಸದಸ್ಯರಾದ **ಶ್ರೀ ಜಗನ್ನಾಥ್ ಕೆ. ಹಲಮಡಗಿ, ಮೊ. 9880366128** ಮತ್ತು **ಶ್ರೀ ರಾಜಶೇಖರ ಪಾಟೀಲ, ಯೋಜನಾ ಸಹಾಯಕರು, ಕರಾವಿಪ ಮೊ : 9008442557 / ಮೊ : 9483549159** ಇವರನ್ನು ಸಂಪರ್ಕಿಸುವುದು.

ಗಮನಿಸಿ : ಕಲಬುರ್ಗಿಯಿಂದ ಹುಮನಾಬಾದ್‌ಗೆ ಸಾಕಷ್ಟು ಬಸ್ಸುಗಳಿರುವುದರಿಂದ ಶಿಬಿರಾರ್ಥಿಗಳು ಕಲಬುರ್ಗಿಗೆ ಪ್ರಯಾಣಿಸಿ ನಂತರ ಹುಮನಾಬಾದ್‌ಗೆ ತೆರಳಬಹುದು.

ವಂದನೆಗಳು,

ಇತಿ ವಿಶ್ವಾಸದ,

(ಗಿರೀಶ್ ಬಿ. ಕಡ್ಲೇವಾಡ)
ಗೌರವ ಕಾರ್ಯದರ್ಶಿ.

ವಿಜೇತ ವಿದ್ಯಾರ್ಥಿ : 1. Huligevva.
m. 8861610765

2. ~~P Pavankumar.~~
Shwetha. K.
m. 7892302438

3. Usha. R.P.
m. 8861610705